ಶ್ರೀ ಬಿ.ಎಚ್. ಬೋರಣ್ಣಗೌಡ.—ಹಾಗಾದರೆ ಅವರ ಮೇಲೆ ಸೂಕ್ತಕಾರ್ಯಕ್ರಮ ಕೈಗೊಳ್ಳಲಾಗಿದೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ಈ ಕೆಲಸ ಬಹಳ ಕಾಲದ ಹಿಂದೆ ನಡೆದುದು. ಆ ವಿಚಾರದಲ್ಲಿ ಏನು ಕಾರ್ಯಕ್ರಮ ಕೈಕೊಳ್ಳಲಾಯಿತೆಂದು ಹೇಳಲು ಸಾಧ್ಯವಿಲ್ಲ.

ಶ್ರೀ ಬಿ. ಎಚ್. ಬೋರಣ್ಣಗೌಡ.—ಈ ಕೆಲಸ ಆಗ ಬೇಕೆಂದು ಬಹಳ ಹಿಂದಿನಕಾಲದಿಂದಲೂ ಒತ್ತಾಯ ಬರುತ್ತಿದೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ಹೌದು. ಆದರೆ ಉದ್ದೇಶಪೂರ್ವಕವಾಗಿ ಏನೂ ಈ ಕೆಲಸ ನಿಧಾನ ವಾಗಿಲ್ಲ, ಚೀಫ್ ಇಂಜನಿಯರಿಗೆ ಈ ನ್ಯಳ ಅಜಮಾ ಯಿಷಿಮಾಡಿ ಜಾಗ್ರತೆಯಾಗಿ ಈ ಸೇತುವೆ ಕೆಲಸವನ್ನು ಪ್ರಾರಂಭಿಸಬೇಕೆಂದು ಹೇಳಿದೆ.

ಶ್ರೀ ಬಿ.ಎಚ್. ಬೋರಣ್ಣಗೌಡ.—ಹೆತ್ತೂರು ಹೋಬಳಿ ಯಲ್ಲಿರುವ ಹುಣಸಕಲ್ ಕೊಲ್ಲಮಂಕೇನ ಹೊಳೆಗೆ ಸೇತುವೆ ಕಟ್ಟಿಸಿಕೊಡಬೇಕೆಂದು ಎಷ್ಟು ದಿನಗಳಿಂದ ಕೇಳುತ್ತಿದ್ದಾರೆ?

ಶ್ರೀ ಕಡಿದಾಳ್ ಮಂಜಪ್ಪ.—ಇದು IV ಕ್ಲಾಸ್ ರಸ್ತೆ. ಈ ಸೇತುವೆ ಕಟ್ಟುವ ಬಗ್ಗೆ ಒಂದು ಎಸ್ಟಿಮೇಟನ್ನು ಆಲ್ಲಿನ ಡಿಸ್ಟ್ರಿಕ್ಟ್ ಬೋರ್ಡ್ ಅಧ್ಯಕ್ಷರಿಗೆ ಕಳುಹಿಸಿದೆ.

ಶ್ರೀ ಬಿ. ಎಚ್. ಬೋರಣ್ಣಗೌಡ.—ಹಾಸನ ಡಿಸ್ಟ್ರಿಕ್ಟ್ ಬೋರ್ಡ್ ಅಧ್ಯಕ್ಷರು ತಮಗೆ ಬೇಕಾದ ಕಡೆ ಈ ಸೇತುವೆ ಕೆಲಸ ಮಾಡಿಸಿದ್ದಾರೆಂಬುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ಬಂದಿಲ್ಲ.

ಶ್ರೀ ಬಿ. ಎಚ್ ಬೋರಣ್ಣಗೌಡ.—ಆ ರೀತಿ ಕೆಲಸ ನಡೆದಿರುವುದನ್ನು ತಮ್ಮ ಗಮನಕ್ಕೆ ತಂದರೆ ಆ ಬಗ್ಗೆ ಸೂಕ್ತಕಾರ್ಯಕ್ರಮವನ್ನು ಕೈಕೊಳ್ಳುವರಾ?

ಶ್ರೀ ಕಡಿದಾಳ್ ಮಂಜಪ್ಪ.—ಆ ಬಗ್ಗೆ ನಜಾಂಶವು ಕಂಡುಬಂದಲ್ಲಿ, ಕಾನೂನು ಪ್ರಕಾರ ನಡೆಯಲು ಸರ್ಕಾರ ಸಿದ್ಧವಾಗಿದೆ.

ಒಬ್ಬ ಸದಸ್ಯರು.—ಶೆಟ್ಟಿಹಳ್ಳಿ ವಿಚಾರವೇನಾಯಿತು? ಈ ಬಗ್ಗೆ ತೀವ್ರ ಕಾರ್ಯಕ್ರಮವನ್ನು ಜಾಗ್ರತೆ ಕೈಕೊಳ್ಳುವ ಉದ್ದೇಶ ಸರ್ಕಾರಕ್ಕಿದೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ಸೆಂಟ್ರಲ್ ರೋಡ್ ಫಂಡಿನ ಬಾಬಿಗಾಗಿ ಕೇಂದ್ರ ಸರ್ಕಾರದಿಂದ ಬರುವ ಹಣದಿಂದ ಈ ಕೆಲಸವನ್ನು ಮಾಡಿಸಬೇಕೆಂಬುದು ಸರ್ಕಾರದ ಉದ್ದೇಶ. ಇದು ಯೋಚನೆಮಾಡತಕ್ಕ ವಿಚಾರ.

---

## Famine Relief Works in Chiknaikanahalli Taluk.

*Q.*—585. Sri C. H. LINGADEVARU (Chiknaikanahalli).—

Will the Government be pleased to state:—

(*a*) the famine relief works that are undertaken in Chikanaikanahalli Taluk during 1950-51 and 1951-52;

(*b*) the amount spent on each item of work (details to be furnished)?

*A.*—Sri KADIDAL MANJAPPA (Minister for Revenue and Public Works).—

(*a*) No works were taken up in 1950-51 by the Public Works Department in this taluk, as famine relief works. Disilting of tanks and improvements of certain tanks under Grow More Food Scheme were taken up in the taluk during 1951-52 as a measure of distress relief.

(*b*) Statement appended below.

Statement showing desilting of tanks started in Chiknaikanahalli Taluk as a Distress Relief Measure.

| | *Name of Tank* | *Programme* | *Outlay* | *Remarks.* |
|---|---|---|---|---|
| 1. | Chiknaikanahalli Urumundinakere .. | 250 | .. | Work completed |
| 2. | Dabbeghatta tank .. | 250 | 163 | Do |
| 3. | Naduvanahalli tank .. | 250 | 191 | Do |
| 4. | Byadarahalli tank .. | 250 | 236 | Do |
| 5. | Handanakere tank .. | 1,500 | 106 | In progress |
| 6. | Malligere tank .. | 1,000 | 274 | Do |
| 7. | Belaguli tank .. | 2,000 | 347 | Do |
| 8. | Doddabidare tank .. | 1,000 | 1,402 | Completed |
| 9. | Mothihalli tank .. | 2,000 | .. | Do |
| 10. | Yelandur tank .. | 1,000 | 447 | In progress |
| 11. | Bhattarahalli tank .. | 1,000 | .. | Do |
| 12. | Avalagere tank .. | 1,000 | 104 | |
| | Total .. | 11,500 | 3,270 | |

Statement of works taken up under Extensions and Improvements as a measure of Distress Relief.

| *Name of Tank* | *Programme* | *Outlay* | *Remarks.* |
|---|---|---|---|
| Improvements to waste-weir sluice of Hesarrahalli tank .. | 1,700 | 618 | In progress |
| Improvements to waste-weir sluice of Madanamadu tank .. | 400 | 138 | Do |
| Improvements to waste-weir sluice of Krishnarajasagara J. C. Pura .. | 800 | 256 | Do |
| Constructing revetment to Gopalapura .. .. | 2,000 | 1,429 | Do |
| Protective works to Taremarada Ane | 1,900 | 1,218 | Do |
| Total .. | 6,800 | 3,659 | |

Statement of works taken up under the Grains Programme.

| *Name of Tank* | *Programme* | *Exp.* |
|---|---|---|
| Gravel casing to Dubbaghatta tank | 500 | 300 |
| Gravel casing to Singanahalli tank .. | 500 | 400 |
| Improving the existing feeder channel to Hosahalli tank .. | 500 | 800 |
| Clearing silt in the left bank channel of Boranakanive tank .. | 2,000 | 1,712 |
| Total .. | 3,500 | 3,212 |

ಶ್ರೀ ಸಿ. ಎಚ್. ಲಿಂಗದೇವರು.—Distress relief ಬಗ್ಗೆ 1950—51 ಮತ್ತು 1951—52ರಲ್ಲಿ ಎಷ್ಟು ಕೆಲಸ ನಡೆದಿದೆ ?

ಶ್ರೀ ಕಡಿದಾಳ್ ಮಂಜಪ್ಪ.—1950—51ರಲ್ಲಿ ಈ ಕಾರ್ಯದ ಬಗ್ಗೆ ಏನೂ ಕೆಲಸ ನಡೆದಿಲ್ಲ. 1951—52ರಲ್ಲಿ ಸ್ವಲ್ಪಮಟ್ಟಿಗೆ ಕೆಲಸ ನಡೆದಿರುವ ಅಂಶವನ್ನು ಉತ್ತರದಲ್ಲಿಯೇ ತಿಳಿಸಲಾಗಿದೆ.

ಶ್ರೀ ಸಿ. ಎಚ್. ಲಿಂಗದೇವರು.—ಹಾಗಾದರೆ 1950—51ರಲ್ಲಿ ಆ ಪ್ರದೇಶದಲ್ಲಿ ಕ್ಷಾಮವಿರಲಿಲ್ಲವೆಂದು ತಮ್ಮ ಅಭಿಪ್ರಾಯವೇ ?

ಶ್ರೀ ಕಡಿದಾಳ್ ಮಂಜಪ್ಪ.—ಇರಲಿಲ್ಲವೆಂದು ನಮಗೆ ಬಂದಿರುವ ವರ್ತಮಾನ.

---

**Estimate for land Atchkat under Ankasandra Tank.**

*Q.*—586. Sri C. H. LINGADEVARU.—(Chiknaikanahalli.—

Will the Government be pleased to state :—

(*a*) the estimated amount towards the construction of Ankasandra tank in Chiknaikanahalli Taluk ;

(*b*) the extent of land that would be brought under irrigation ?

*A.*—Sri KADIDAL MANJAPPA (Minister for Revenue and Public Works).—

(*a*) Rs. 4.11 lakhs.

(*b*) 650 acres.

ಶ್ರೀ ಸಿ. ಎಚ್. ಲಿಂಗದೇವರು.—ಈ ಅಂಕನಂವ್ರದ ಕೆರೆ ಎಸ್ಟಿಮೇಟ್ ಆದುದು ಯಾವಾಗ ?

ಶ್ರೀ ಕಡಿದಾಳ್ ಮಂಜಪ್ಪ.—1940 ರಲ್ಲಿ.

ಶ್ರೀ ಸಿ. ಎಚ್. ಲಿಂಗದೇವರು.—ಇದು ಮಂಜೂರಾಯಿತೇ ?

ಶ್ರೀ ಕಡಿದಾಳ್ ಮಂಜಪ್ಪ.—ಇಲ್ಲ. 1940 ರಲ್ಲಿ ಈ ಪ್ರಾಜೆಕ್ಟನ್ನು ಸರ್ಕಾರದವರು ಪರಿಶೀಲಿಸಿ, ಇದು ಲಾಭದಾಯಕವಲ್ಲ, ಪ್ರಯೋಜನಕರವಲ್ಲವೆಂದು ಆ ಕೆಲಸವನ್ನು ತೆಗೆದುಕೊಂಡಿಲ್ಲ. ಈಚೆಗೆ ಕಡಿಮೆ ಖರ್ಚಿನ ಒಂದು ಅಂದಾಜು ತಯಾರಿಸಲು ಸ್ಥಳಪರಿಶೀಲನೆ ನಡೆಯಿಸಿ ಮಾಡುವಂತೆ ಸ್ಥಳದ ಇಂಜಿನಿಯರಿಗೂ, ಚೀಫ್ ಇಂಜಿನಿಯರಿಗೂ ತಿಳಿವಳಿಕೆ ಕೊಟ್ಟಿದೆ.

ಶ್ರೀ ಸಿ. ಎಚ್. ಲಿಂಗದೇವರು.—ಯಾವಾಗ ಕೊಟ್ಟಿದೆ ?

ಶ್ರೀ ಕಡಿದಾಳ್ ಮಂಜಪ್ಪ.—1952ನೆಯ ಡಿಸೆಂಬರ್‌ನಲ್ಲಿ.

ಶ್ರೀ ಸಿ. ಎಚ್. ಲಿಂಗದೇವರು.—ಈ ಎಸ್ಟಿಮೇಟ್ ಆಗಿದೆಯೇ ?